ಮಾಡಿಸಿದ್ದಲ್ಲಿ, ಮತ್ತೆ ಹಾಗೆ ಮಾಡುವುದು ಸಾಧ್ಯವಿಲ್ಲ. ನಿಮ್ಮೆಲ್ಲರ ಸಪೋರ್ಟ್ ಇರುವುದು ಈಗ ಜಗಜ್ಜಾಹೀರಾಗಿದೆ. ನಿನ್ನೆ ಕಾಲೇಜಿಗೆ ಹೋಗಿ ಸುಮಿಯ ಅಡ್ರೆಸ್ ತಗೊಂಡಿದ್ದೇನೆ. ಸುಮಿಯ ಅಣ್ಣನ ಆಫೀಸಿಗೆ ಹೋದರೆ ಸುದ್ದಿಯಾಗುತ್ತದೆ ಎಂದು ಅಲ್ಲಿಗೆ ಹೋಗಿಲ್ಲ. ನೀವೂ ಯಾರೂ ಆ ಬಗ್ಗೆ ದುಡುಕಬೇಡಿ... ಆದಷ್ಟು ಸಮಾಧಾನದಿಂದ ಇರೋಣ. ಸುಮಿ – ಪರಸ್ಪರ ಮನಸ್ಸು ಗೆದ್ದಾಗಿದೆ. ಇನ್ನು ಲೋಕದ ಮನಸ್ಸು ಗೆಲ್ಲೋದು ಬಾಕಿ ಇದೆ ಅಂದಿದ್ದಳು'.

'ಸೋ ನಂದೂ ಅದೇ ವಿಶನ್, ಅದೇ ಮಿಶನ್... ನವ್ ಗಿವ್‌ಮಿ ಯುವರ್ ಪರ್ಮಿಶನ್!' ಎಂದು ನಾಟಕೀಯವಾಗಿ ಅವರನ್ನು ನಗಿಸಲು ಪ್ರಯತ್ನಿಸಿದ. ಅವರೆಲ್ಲರೂ ಮೌನವಾಗಿದ್ದರು. ಬಸ್ಸು ಬಿಡಲು ರೆಡಿಯಾದಾಗ 'ನೀವೆಲ್ಲ ನಾನು ಸುಮಿಯನ್ನು ಹುಡುಕಿ ಹೋಗ್ತಿರುವೆ ಅಂದ್ಕೊಂಡಿರುವಿರಿ, ಅಲ್ವಾ? ಖರೆ ಅಂದ್ರೆ ಇದು ನನ್ನನ್ನೇ ನಾನು ಶೋಧಿಸಿಕೊಳ್ಳುವ ಪಯಣ... ಪ್ರೀತಿಯಲ್ಲಿ ಪ್ರೀತಂ ಪಾಗಲ್ ಆಗ್ಯಾ ಅಂತ ನಗ್ಯಾಡ್ತೀರಿ, ನಂಗೊತ್ತು. ಆದ್ರೆ ಅದೊಂಥರಾ ಸುಖ... ನಾ ಬರುವವರೆಗೂ ಆಯಿ ನಿಮ್ಮ ತಾಯಿ. ಅವಳ ಬಗ್ಗೆ ಕಾಳಜಿಯಿರಲಿ' ಎಂದು ಅವರಿಗೆಲ್ಲ ಕೈ ಬೀಸಿ ಕಣ್ಮರೆಯಾದ.

***

ಅಂಕೋಲಾ ಬಿಟ್ಟು ಅರಬೈಲು ದಾಟುವವರೆಗೂ ಆಯಿ ಬಗ್ಗೆಯೇ ಯೋಚಿಸುತ್ತಿದ್ದ. ಆಯಿಯನ್ನು ಸಮಾಧಾನ ಮಾಡಿ ಒಪ್ಪಿಸುವುದು ಪ್ರೀತಂನಿಗೆ ಸಾಕುಬೇಕಾಗಿತ್ತು. 'ಮಗನೆ, ನಿಮ್ಮ ಪ್ರೀತಿ ಗಟ್ಟಿಯಾಗಿದ್ರೆ ತಿರುಗಿ ಬರ್ತಾಳೆ, ಗಡ್ಬಿಡಿ ಮಾಡಬೇಡವ್ವೊ, ತಡಿಯೊ' ಅಂದಿದ್ದಳು ಆಯಿ. ಅವಳ ಆತಂಕ, ಕಾಳಜಿ ಸಹಜವೇ ಆಗಿತ್ತು. 'ಯಾರಿಗೂ ಕೆಟ್ಟದು ಮಾಡದ ಮಗನನ್ನು ಆ ನಮೂನಿ ನಿಟ್ಟೆ ತಪ್ಪುವಂತೆ ಹೊಡೆದವರು, ಏನು ಮಾಡೂಕೂ ಹೇಸದವರು' ಎಂಬುದು ಆಯಿಯನ್ನು ಒಳಗಿಂದೊಳಗೆ ಕೊರೆಯುತ್ತಿದ್ದದ್ದು ಪ್ರೀತಂನಿಗೆ ಗೊತ್ತಿತ್ತು. ಆದರೆ ತಮ್ಮ ಪ್ರೇಮವು ಎಲ್ಲಾ ಪ್ರಮಾಣಗಳನ್ನು ಮೀರಿದ ಅವಸ್ಥೆಯಲ್ಲಿತ್ತಲ್ಲ. ಅದು ಆಯಿಯ ಗ್ರಹಿಕೆಗೆ ಬಾರದಿರಲೂ ಸಾಧ್ಯವಿರಲಿಲ್ಲ. 'ಹಂಗಾರೆ ನೀ ಒಬ್ನೇ ಹೋಗುದ್ ಬೇಡಾ ಮಗಾ, ನಾನೂ ಬತ್ತಿ ಸಂತಿಗೆ' ಅಂದಿದ್ದಳು. 'ಬ್ಯಾಡ ಆಯಿ, ನಾನೇನ್ ಅಲ್ಲಿ ಯುದ್ಧ ಮಾಡಿ ಆ ಹುಡುಗೀನ ಬಿಡಿಸೋಕೆ ಹೋಗ್ತಿಲ್ಲ. ಏನಿದ್ರೂ ಅವರ ಮನಸ್ಸು ಗೆಲ್ಲೋದು...' ಎಂದಿದ್ದ.

'ಸ್ವಂತ ತಂಗಿ ತಲಿ ಕಡೂಕೂ ತಯಾರಾಗಿದ್ರು ಅಂತ ನೀನೇ ಶೈಲತ್ತೆ ಅನ್ನೋರ ಕತೆ ಹೇಳಿದ್ಯಲ್ಲೊ ಮಗ. ನಿನ್ ತಲಿಗೆ ಆ ನಮೂನಿ ಬಡಿದು ಜೀಂವ ತೆಗೂಕೆ ಮಾಡದ್ರಲ್ಲ ಮಗನೆ. ಅಂಥವರಿಗೆ ಮನಸು ಅನ್ನುವುದು ಇರುದೇನೋ?' ಎಂದಿದ್ದಳು. 'ಅದೆಲ್ಲ ಖರೆ ಆಯಿ. ಆದರೆ ಸುಮಿಗೆ ಇಂಥ ಗಳಿಗೆಯಲ್ಲಿ ನನ್ನ ಸಾಥ್ ಅಗತ್ಯವಿದೆ ಎಂದು ಮನಸು ಹೇಳ್ತಿದೆ. ನಾನು ಇಲ್ಲಿ ಸುಮ್ಮನಿದ್ದು ನೆಮ್ಮದಿಯಾಗಿರಲಾರೆ... ನಾನು ನೆಟ್ಟಗೆ ಸುಮಿಯ ಮನೆಗೆ ಹೋಗುದಿಲ್ಲ. ಫಸ್ಟು ಸುಮಿಯ ಶೈಲತ್ತೆಗೆ ಸಿಕ್ತೆ. ಅವಳ ಅಡ್ರೆಸ್ಸು ಫೋನ್ ನಂಬರು, ಏನೂ ಇಲ್ಲ ಖರೆ. ಆದ್ರೆ ಟೀಚರ್ ಆಗಿರುದರಿಂದ ಹುಡುಕುದು ಕಷ್ಟ ಆಗುವಂಗಿಲ್ಲ. ಒಮ್ಮೆ ಶೈಲತ್ತೆ ಸಿಕ್ಕಿದರೆ ಮುಂದಿನ ದಾರಿ ಅವಳೇ ಕಾಣಿಸ್ತಾಳೆ. ನೀ ಟೆನ್ಶನ್ ಮಾಡ್ಕಬೇಡಾ ಆಯಿ' ಎಂದು ಪ್ರೀತಂ ಗುಲಾಬಿಗೆ ಸಮಾಧಾನ ಹೇಳಿದ್ದ.

ಬಸ್ಸು ಅರಬೈಲು ಘಟ್ಟ ಹತ್ತಿ ಯಲ್ಲಾಪುರ ಕಿರವತ್ತಿ ದಾಟುತ್ತಿರುವಂತೆ ಸಹ್ಯಾದ್ರಿ ಶ್ರೇಣಿಗಳ ದಟ್ಟಕಾಡು ವಿರಳವಾಗಿ, ಘಟ್ಟದ ಮೇಲಿನ ಲಕ್ಷಣಗಳು ಶುರುವಾಗಿದ್ದವು. ಕಲಘಟಗಿ ತಲುಪಿದಾಗ ನೈಸರ್ಗಿಕವಾಗಿ ಮಾತ್ರವಲ್ಲ, ಜನರ ದಿರಿಸು ಮತ್ತು ಮಾತುಕತೆಗಳಲ್ಲೂ ಬಯಲುಸೀಮೆಯ ಘಮಲು ಪ್ರಕಟವಾಗಿತ್ತು. ಬಟಾಬಯಲು, ಬಿಸಿ ಗಾಳಿ, ಹೊಲದಲ್ಲಿ ಹೊಸ ಬಗೆಯ ಬೆಳೆಗಳು, ಓಡಾಡುವ ಭಿನ್ನ ತಳಿಯ ದನಕರುಗಳು, ಉದ್ದುದ್ದ ಸಾಲುಗಳಲ್ಲಿ ಉಳುಮೆ ಮಾಡಿದ ಗುರುತುಗಳು – ಇವನ್ನೆಲ್ಲ ಪ್ರೀತಂನ ಹೊರಗಣ್ಣು ಕಾಣುತ್ತಿರುವಂತೆಯೇ, ಕಡಲ ಜಲರಾಶಿಯಲ್ಲಿ ಚಿಕ್ಕ ದೋಣಿಯಲ್ಲಿ ಚುಕ್ಕೆಯಾಗುವ ಮನುಷ್ಯ, ಬಟಾಬಯಲ ತುದಿಯಲ್ಲಿ ಬಿಂದುವಾಗುವ ಮನುಷ್ಯ – ಇವರ ಸಮಾನ ಹಂಬಲಗಳು, ಹುಡುಕಾಟಗಳ ಬಗ್ಗೂ ಅವನಿಗೆ ಯೋಚನೆಗಳು ಬರುತ್ತಿದ್ದವು. ಕಡಲಿರಲಿ, ಕಾಡಿರಲಿ ಅಥವಾ ಇಂಥ ಬಯಲೇ ಇರಲಿ, ತನ್ನ ಅನಾಮಿಕತೆಯನ್ನು ಮೀರುವ, ಭೌತಿಕ ಆಕಾರ–ಆಯಾಮಗಳನ್ನು ವಿಸ್ತರಿಸುವ ಮನುಷ್ಯ ಚೈತನ್ಯವನ್ನು ಒಳಗಣ್ಣು ಅರಿಯುತ್ತಿತ್ತು. ತನ್ನ ಯೋಚನೆಗಳು ಈಚೆಗೆ ಗಂಭೀರ ಸ್ವರೂಪ ಪಡೆಯುತ್ತಿರುವುದರ ಅರಿವಾಗಿ ಅಚ್ಚರಿಗೊಂಡ. ಸೀದಾ ಸಾದಾ ವಿಚಾರಗಳಿಗಷ್ಟೇ ಸೀಮಿತಗೊಂಡಿದ್ದ ತನ್ನನ್ನು ಪ್ರೇಮವು ನವಿರುಭಾವದಿಂದ ಚಿಂತನೆಯ ನೆಲೆಗೂ ವಿಸ್ತರಿಸುತ್ತಿದೆಯೇ? ಬಯಲುಸೀಮೆ ಕಡೆಯ ಪ್ರೀತಿ ಪ್ರೇಮ ದ್ವೇಷ ಸೇಡು ಕೊಲೆಗಳ ನೂರಾರು ಕತೆಗಳನ್ನು ಕೇಳಿದ್ದೇನೆ. ಸಾವಿನ ಅರಿವಿದ್ದರೂ ತನ್ನನ್ನು ಅತ್ತ ಸೆಳೆಯುತ್ತಿರುವ ಶಕ್ತಿ ಯಾವುದು, ಹಾಗಾದರೆ? ಚಂಡಮಾರುತದ ಮುನ್ಸೂಚನೆಯಿದ್ದಾಗಲೇ ನಿನ್ನಪ್ಪನಿಗೆ ಕಡಲಿಗಿಳಿವ ಪ್ರಚೋದನೆ ಹೆಚ್ಚಾಗುತ್ತಿತ್ತು ಎಂದು ಆಯಿ ಹೇಳುತ್ತಿರುತ್ತಾಳೆ. ತಾನೂ ಅಂಥ ಹುಂಬತನದ ಹಾದಿ ಹಿಡಿದಿರುವೆನೇ?

ಬಸ್ಸು ಹುಬ್ಬಳ್ಳಿ ಬಸ್ ಸ್ಟ್ಯಾಂಡಿಗೆ ಬಂದಾಗ ಕಂಡಕ್ಟರ್ 'ಹತ್ತ್ ನಿಮಿಷ ಟೈಮಿದೆ ನೋಡ್ರೀ... ಮುಂದೆ ಹೋಗುವವ್ರು ಊಟ ತಿಂಡಿ ಮಾಡ್ಕಳ್ಳಿ' ಎಂದ. ಪ್ರೀತಂ ಸೀಟಿನ ಮೇಲೆ ಕರ್ಚೀಫ್ ಇಟ್ಟು ಕೆಳಗಿಳಿದ. 'ಫಸ್ಟ್ ಟೈಮ್ ಮಾವನ ಮನೆ ಗುಲ್ಬರ್ಗಾಕ್ಕೆ ಪದಾರ್ಪಣೆ ಮಾಡಿದ್ದೀರಿ, ಖಾಲಿ ಹಾತ್ ಬಂದಿದ್ದಿರಲ್ಲ ಅಳಿಯಂದಿರೇ' ಎಂದು ಸುಮಿ ನಾಟಕೀಯವಾಗಿ ಕಿಚಾಯಿಸಬಹುದು! ಅರ್ಧ ಕಿಲೋ ಧಾರವಾಡ ಪೇಡಾ ಕಟ್ಟಿಸಿಕೊಂಡ. 'ಲೇ ಕೋತಿ, ಇದು ಮಾವನ ಮನೆಗೆ ಆಯ್ತು, ನಂಗೆ ಪೈ ರೆಸ್ಟೋರೆಂಟಿಂದ ಖಾಜ್ಮಜಿ ಯಾಕೆ ತರಲಿಲ್ಲ?' ಅಂತ ಕ್ಯಾತೆ ತೆಗಿಬಹುದು ಅನಿಸಿ ತನ್ನಷ್ಟಕ್ಕೇ ನಕ್ಕ. ಸುಮಿಯನ್ನು ಮೀಟ್ ಆಗುವುದೇ ಖಾತ್ರಿ ಇಲ್ಲದಿರುವಾಗ, ಮುಂದೆ ಏನಾಗಲಿದೆ ಎನ್ನುವ ಅಂದಾಜೂ ಇಲ್ಲದಿರುವಾಗ ಇಂಥ ಕಲ್ಪನೆಗಳು ಹುಟ್ಟಿಕೊಂಡು, ಈ ಕ್ಷಣಗಳನ್ನು ಹಗುರಗೊಳಿಸುವ ರೀತಿಗೆ ಚಕಿತಗೊಂಡ. ಸುಮಿಯನ್ನು ತಾನು ಭೇಟಿ ಮಾಡುವ ಎಲ್ಲಾ ಸಾಧ್ಯತೆಗಳನ್ನು ಅವಳ ಮನೆಯವರು ತಡೆಯುತ್ತಾರೆಂಬುದನ್ನು ತಿಳಿದಿರುವಾಗಲೂ, ಪೇಡಾ ಪ್ಯಾಕೆಟ್ ಕೊಂಡದ್ದು ಪ್ರೇಮದ ಕಿಲಾಡಿತನವೇ ಇರಬೇಕು, ಅಥವಾ ಇದು ಪ್ರೇಮದಿಂದ ಉಕ್ಕುವ ಅಖಂಡ ಆಶಾವಾದವೇ ಇರಬೇಕು ಅನಿಸಿತು. ಇಂಥ ವೈಚಾರಿಕ ಹೊಯ್ದಾಟಕ್ಕೋ, ಅಥವಾ ಆಯಿ ಚೀಲದಲ್ಲಿಟ್ಟಿದ್ದ ಕೊಟ್ಟೆ ರೊಟ್ಟಿ ಕಾಯ್ ಚಟ್ನಿ ತಿಂದ ಪರಿಣಾಮಕ್ಕೋ ಅವನಿಗೆ ಕಣ್ತೂಗಿ ಬರುತ್ತಿತ್ತು. ಬಸ್ಸು ರಣರಣ ಬಿಸಿಲಲ್ಲಿ ಪ್ರೀತಂ ಎಂದೂ ಕಾಣದ ಬಾದಾಮಿ, ಬಾಗಲಕೋಟ ಊರುಗಳನ್ನು ದಾಟಿ ಒಂದೇ ಸಮನೆ ಮುಂದೆ ಸಾಗುತ್ತಿತ್ತು. ಗುಡ್ಡ ಬೆಟ್ಟಗಳಿಲ್ಲದ ವಿಶಾಲ ಬಯಲು ಅವನಿಗೆ ಬೆರಗನ್ನು ಮೂಡಿಸುತ್ತಿತ್ತು.

ಬಟಾ ಬಯಲಿಗೂ ಕೂಡ ನಿಗೂಢತೆಯ ಅಂಶ ಬೆರೆತಿದೆ ಅನಿಸುತ್ತಿತ್ತು. ರಸ್ತೆ ಪಕ್ಕದಲ್ಲಿ ಹಸಿರು ಹೊತ್ತು ನಿಂತಿದ್ದ ಹುಣಿಸೆ ಬೇವು ಆಲದ ಮರಗಳು ಅವನ ಯೋಚನಾ ಸರಣಿಯನ್ನು ಸ್ವಲ್ಪ ಮಟ್ಟಿಗೆ ತುಂಡು ತುಂಡು ಮಾಡುತ್ತಿದ್ದವು. ಅಷ್ಟೊಂದು ಫಲವತ್ತಾದ ಮಣ್ಣನ್ನೂ, ಆ ಮಣ್ಣಲ್ಲಿ ಸಂತೃಪ್ತವಾಗಿ ತೂಗುತ್ತಿದ್ದ ಜೋಳ ಹತ್ತಿ ಗಿಡಗಳನ್ನೂ ಅವನು ಮೊದಲ ಬಾರಿಗೆ ನೋಡುತ್ತಿದ್ದ. ಸುಮಿಯ ಸರಳ ಮನಸ್ಸು, ಮಾತಿನಲ್ಲಿಯ ತುಂಟತನ, ಚಿಮ್ಮುವ ಜೀವನಪ್ರೀತಿ, ಒಗರುತನ, ಒರಟುತನ ಎಲ್ಲವೂ ಈ ಮಣ್ಣು ಬಯಲು ಆಕಾಶಗಳ ಸಾಂದ್ರರೂಪದಂತೆ ಅನಿಸಿತು. ಈ ಸುಡುಬಿಸಿಲ ಹುಡುಗಿಗೆ ಕಡಲಿನಷ್ಟು ದಾಹ. ಕಡಲಿನಿಂದಲೂ ಇಂಗದ ದಾಹವನ್ನು ಕಡುಪ್ರೇಮದಲ್ಲಿ ತಣಿಸಿಕೊಳ್ಳುವ ಧಾವಂತ. ಕಡಲಂಥ ಕಡಲೊಳಗೆ ಜಸ್ಟ್ ಒಂದು ಬಿಂದುವಾಗಿದ್ದ ತನ್ನಲ್ಲಿ ಪ್ರೇಮದ ಸಾಗರವನ್ನೇ ತೋರಿದಳು. ತನ್ನೊಳಗೆ ಅಜ್ಞಾತವಾಗಿದ್ದ ಪ್ರೇಮವನ್ನು ಬಯಲು ಮಾಡಿ ನಿಜ ಸ್ವರೂಪವನ್ನು ತೋರಿದಳು...

ಶ್ಯೇ! ಏನಾಗಿದೆ ನನಗೆ? ಇಂಥ ತಲ್ಲಣದ ಸಮಯದಲ್ಲಿ ರೂಪಕದ ಭಾಷೆಯಲ್ಲಿ (ಸುಮಿಯದೇ ಪದ) ಯೋಚಿಸುತ್ತಿರುವೆನಲ್ಲ! ಇದು ಪ್ರೇಮದ ಪ್ರತಾಪವೇ ಅಥವಾ ವಿರಹದ ಪ್ರಕೋಪವೇ? ಪಾಪದ ಹುಡುಗಿ ಎಂಥ ಕಷ್ಟದಲ್ಲಿರುವಳೋ! ಚೂರು ಅವಕಾಶ ಇದ್ದರೂ ಹೇಗಾದರೂ ಮಾಡಿ ಕಾಂಟ್ಯಾಕ್ಟ್ ಮಾಡುವಂಥ ಛಾತಿಯುಳ್ಳವಳು. ಅದರರ್ಥ ಅವಳಪ್ಪ ಅವಳನ್ನು ಖಂಡಿತವಾಗಿಯೂ ಕೂಡಿ ಹಾಕಿದ್ದಾನೆ. ಹಾರುವ ಹಕ್ಕಿಯಂತೆ ಇರಲು ಬಯಸುವ ಆ ಹುಡುಗಿಗೆ ಮಾನಸಿಕವಾಗಿ ಅದೆಷ್ಟು ಹಿಂಸೆ ಆಗಿರಬಹುದು! ಸುಮಿಯನ್ನು ಹುಡುಕಿ ತನ್ನ ಮನೆವರೆಗೂ ಬಂದದ್ದಕ್ಕಾಗಿ ಆ ಮನುಷ್ಯ ಇನ್ನಷ್ಟು ಕಠೋರ ಆಗಬಹುದು. ಅವಳಿಗೆ ಮತ್ತಷ್ಟು ಕಿರುಕುಳ ನೀಡಬಹುದು. ಹಾಗಂತ ಇದು ತಾನು ನಿಷ್ಕ್ರಿಯನಾಗಿರುವ, ತಟಸ್ಥನಾಗಿರುವ ಗಳಿಗೆಯಲ್ಲವಲ್ಲ... ಪ್ರೀತಂನಿಗೆ ತನ್ನ ವೈಯಕ್ತಿಕ ಇತಿಮಿತಿಗಳ ಅರಿವಿರುವುದಾದರೂ ಪ್ರೇಮದಲ್ಲಿ ಸಂಭವಿಸುವ ಅಪಾರ ಸಾಧ್ಯತೆಗಳ ಬಗ್ಗೂ ಭರವಸೆ ಮೂಡಿದೆ. ಅದೇ ಅವನನ್ನು ಈ ಪ್ರಯಾಣಕ್ಕೆ